**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**

**ಸಕಲೇಶಪುರ**

**C.C.No.2/2023**

| | | |
|---|---|---|
| **ಹೆಸರುಃ** | **ಸುರೇಂದ್ರ** | **CW-5** |
| **ತಂದೆ/ಗಂಡ ಹೆಸರುಃ** | **ಕರೀಯಪ್ಪ** | **PW-4** |
| **ವಯಸ್ಸುಃ** | **41 ವರ್ಷ** | |
| **ವೃತ್ತಿಃ** | **ಕೂಲಿ ಕೆಲಸ** | |
| **ವಿಳಾಸಃ** | **ಅಚ್ಚನಹಳ್ಳಿ ಗ್ರಾಮ** | **ದಿನಾಂಕಃ 19.01.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ ಪಿ 3 ಎಂದು, ಸಹಿಯನ್ನು ನಿ ಪಿ 3 ಬಿ ಎಂದು ಗುರುತಿಸಲಾಯಿತು. 2 ವರ್ಷಗಳ ಹಿಂದೆ ಅಚ್ಚನಹಳ್ಳಿ ಗ್ರಾಮದಲ್ಲಿ ನಾನು ಹೋಗುತ್ತಿದ್ದಾಗ, ಆಗ ಪೊಲೀಸರು ದಾರಿಯಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಆಗ ಸಮಯ ಮಧ್ಯಾಹ್ನ 2.30 ಆಗಿತ್ತು. ಆ ಸಮಯದಲ್ಲಿ ನನ್ನ ಜೊತೆ ಯಾರು ಇರಲಿಲ್ಲ. ನಿ ಪಿ 3 ರಲ್ಲಿ ಬರೆದಿರುವ ಮಾಹಿತಿಗಳು ಗೊತ್ತಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ದಿಃ *22.03.2022* ರಂದು ಬೆಳಿಗ್ಗೆ *10* ರಿಂದ *11* ರ ಸಮಯದಲ್ಲಿ ಅಚ್ಚನಹಳ್ಳಿ ಗ್ರಾಮದ ಕಾಫಿ ತೋಟದಲ್ಲಿ ನಾನು ಮತ್ತು ಚಾಸಾ *4* ರವರ ಸಮಕ್ಷಮ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಮತ್ತು ಚಾಸಾ *4* ರವರ ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ನನ್ನ

ಸಮಕ್ಷಮ ನಿ ಪಿ *3* ರಂತೆ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ**

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**